ಇ) ಹೌದು.

ಈ) ಈ ಬಿಸಿ ಮಿಶ್ರಣ ಯಂತ್ರವು ಒಂದು ವರ್ಷದಿಂದ ಈ ಸ್ಥಳದಲ್ಲಿರುತ್ತದೆ. ಈ ಬಿಸಿ ಮಿಶ್ರಣ ಯಂತ್ರವನ್ನು ನಡೆಸದ ಹಾಗೆ ನಿಲ್ಲಿಸಲಾಗಿದೆ. ಈ ಯಂತ್ರವನ್ನು ಕೂಡಲೇ ನಗರಸಭೆಯ ಜಾಗದಿಂದ ತೆಗೆಯಲು ಗುತ್ತಿಗೆದಾರರಿಗೆ ತೀವ್ರವಾದ ಎಚ್ಚರಿಕೆ ನೀಡಲಾಗಿದೆ. ಇದರ ಪ್ರಕಾರ ಗುತ್ತಿಗೆದಾರರು ಯಂತ್ರವನ್ನು ಬೇರೆ ಕಡೆ ಸ್ಥಳಾಂತರಿಸುವ ವ್ಯವಸ್ಥೆ ಮಾಡಿಕೊಂಡಿರುತ್ತಾರೆ. ಹಾಗೂ ಈ ಯಂತ್ರವನ್ನು ಜನವರಿ 93ರ ಒಳಗಾಗಿ ಸ್ಥಳಾಂತರಿಸಲಾಗುವುದು.

ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಪೆಲ್‌ಗಳ ಸಂಖ್ಯೆ

854Ë ಶ್ರೀ ಎಂ. ನಾರಾಯಣ ಸ್ವಾಮಿ (ಬೇತಮಂಗಲ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಂಗಾರಪೇಟೆ ತಾಲ್ಲೂಕಿನಲ್ಲಿರುವ ಹಾಸ್ಪೆಲ್‌ಗಳೆಷ್ಟು? (ವಿವರ ನೀಡುವುದು):

ಆ) ಅವುಗಳಲ್ಲಿ ಪರಿಸಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಹಾಸ್ಪೆಲ್‌ಗಳೆಷ್ಟು ಹಾಗೂ ಹಿಂದುಳಿದವರ ಹಾಸ್ಪೆಲ್ ಗಳೆಷ್ಟು(ವಿವರ ನೀಡುವುದು):

ಇ) ಈ ಮೇಲ್ಕಂಡ ಹಾಸ್ಪೆಲ್‌ಗಳ ದುರಸ್ತಿ ಕಾರ್ಯಗಳನ್ನು ತೆಗೆದುಕೊಳ್ಳಲಾಗಿದೆಯೇ ಹಾಗಿದ್ದಲ್ಲಿ ಯಾವಾಗ ಪೂರ್ಣಗೊಳಿಸಲಾಗುವುದು.

ಈ) ಈ ತಾಲ್ಲೂಕಿನಲ್ಲಿ ಇನ್ನು ಹಾಸ್ಪೆಲುಗಳ ಅವಶ್ಯಕತೆ ಇದೆಯೇ ಅವಶ್ಯಕತೆ ಇದ್ದಲ್ಲಿ ಅವುಗಳನ್ನು ಪ್ರಾರಂಭಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೆ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆ ಸಮಾಜ ಕಲ್ಯಾಣ ಒಟ್ಟು ಇಲಾಖೆ

ಮೆಟ್ರಿಕ್	ಪೂರ್ವ	ಬಾಲಕ	ಬಾಲಕಿಯರು	ಬಾಲಕ	ಬಾಲಕಿಯರು	
ಮೆಟ್ರಿಕ್	ಪೂರ್ವ	1	1	6	4	12
ಮೆಟ್ರಿಕ್	ನಂತರ	1	-	-	-	1
		2	1	6	4	13

ಇ) 3ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳ ಕಟ್ಟಡದ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗಿದ್ದು, ಮುಂಬರುವ ಜೂನ್ ಒಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಈ) ಅವಶ್ಯಕತೆಯನ್ನು ಗಮನಿಸಿ, ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳುವುದು.

ಸೇಡಂ ಪುರಸಭೆ ಕೊಳಚೆ ಪ್ರದೇಶ ಅಭಿವೃದ್ಧಿ ಕುರಿತು.

867 - ಶ್ರೀ ಬಸವಂತರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಸೇಡಂ ಪುರಸಭೆ ವ್ಯಾಪ್ತಿಯಲ್ಲಿರುವ 7 ಕೊಳಚೆ ಪ್ರದೇಶಗಳನ್ನು ಗುರುತಿಸಿರುವುದು ನಿಜವಲ್ಲವೆ?

ಆ) ಮೇಲ್ಕಂಡ ಸಾಲಿನಲ್ಲಿ ಸೇಡಂನಲ್ಲಿನ ಇಂದಿರಾನಗರದ ಅಭಿವೃದ್ಧಿಗಾಗಿ ಮೂರು ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗಿದ್ದು, ಆದಷ್ಟು

ಉಳಿದಿರುವ ಕೊಳಚೆ ಪ್ರದೇಶಗಳನ್ನು ಅದ್ಯತೆ ಮೇರೆಗೆ ಸರ್ಕಾರದವರು ತೆಗೆದುಕೊಳ್ಳುವುದಾ ತಿಳಿಸಿದ್ದು ಕಾರ್ಯಗತವಾಗಿದೆಯೇ?

ಇ) ಮಂಜೂರು ಮಾಡಲಾಗಿದ್ದು 3.00 ಲಕ್ಷ ರೂ. ಹಣದಲ್ಲಿ ಇದುವರೆಗೆ ಬಿಡುಗಡೆಯಾಗಿರುವ ಹಣವೆಷ್ಟು ಹಾಗೂ ಖರ್ಚಾಗಿರುವ ಹಣವೆಷ್ಟು?

ಈ) ಅಭಿವೃದ್ಧಿ ಕಾರ್ಯಗಳಲ್ಲಿನ ವಿಳಂಬಕ್ಕೆ ಕಾರಣವೇನು?

ಉ) ಬಿಡುಗಡೆಯಾದ ಹಣವನ್ನು ಕಾಮಗಾರಿಗಳಿಗಾಗಿ ಸಮರ್ಪಕವಾಗಿ ಉಪಯೋಗಿಸಲಾಗಿದೆಯೇ?

ಊ) ದುರುಪಯೋಗವಾಗಿದ್ದಲ್ಲಿ ಸಂಬಂಧಪಟ್ಟವರ ಮೇಲೆ ಸರ್ಕಾರವು ಕೈಗೊಂಡ ಕ್ರಮವೇನು?

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು) :

ಅ) 1989-90 ಸಾಲಿನಲ್ಲಿ ಎರಡು ಕೊಳಚೆ ಪ್ರದೇಶಗಳನ್ನು 1990-91ರಲ್ಲಿ ಐದು ಕೊಳಚೆ ಪ್ರದೇಶಗಳನ್ನು ಒಟ್ಟು 7 ಕೊಳಚೆ ಪ್ರದೇಶಗಳನ್ನು ಸೇಡಂ ಪಟ್ಟಣದಲ್ಲಿ ಗುರುತಿಸಲಾಗಿದೆ

ಆ) 1990-91ರ ಸಾಲಿನಲ್ಲಿ ಸೇಡಂನಲ್ಲಿರುವ ಇಂದಿರಾನಗರದ ಕೊಳಚೆ ಪ್ರದೇಶದ ಅಭಿವೃದ್ಧಿಗಾಗಿ 3.00 ಲಕ್ಷ ರೂ.ಗಳನ್ನು ಮಂಜೂರು ಮಾಡಿರುವುದಿಲ್ಲ. ಆದರೆ 1989Ë90ನೇ ಸಾಲಿನಲ್ಲಿ 1.77 ಲಕ್ಷ ರೂ. (ಅಂದಾಜಿನಲ್ಲಿ) ಇಂದಿರಾನಗರದ ಹರಿಜನವಾಡಾ ಕೊಳಚೆ ಪ್ರದೇಶದ ಅಭಿವೃದ್ಧಿ ಕಾಮಗಾರಿಗಾಗಿ ಒದಗಿಸಲಾಗಿದೆ. ಈ ಪೈಕಿ ಗುತ್ತಿಗೆದಾರ 1.12 ಲಕ್ಷ ರೂ.ಗಳ ಕೆಲಸ ಮಾಡಿದ್ದಾರೆ. ಇದೇ ಆರ್ಥಿಕ ಸಾಲಿನಲ್ಲಿ ಸೇಡಂ ಹೊಸ ಹರಿಜನವಾಡಾ ಕೊಳಚೆ ಪ್ರದೇಶದ ಅಭಿವೃದ್ಧಿ ಕಾಮಗಾರಿಗಳಿಗಾಗಿ 3.69ಲಕ್ಷ ರೂ.ಗಳನ್ನು ಒದಗಿಸಲಾಗಿರುತ್ತದೆ. ಈ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್ ಮುಖೇನ ಗುತ್ತಿಗೆದಾರರಿಗೆ ವಹಿಸಲಾಗಿದೆ

ಇ) ಇಂದಿರಾನಗರ ಹೊಸ ಹರಿಜನವಾಡ ಕೊಳಚೆ ಪ್ರದೇಶದ ಅಭಿವೃದ್ಧಿಗೆ 1.77 ಲಕ್ಷ ರೂ. ಮಂಜೂರಾಗಿದ್ದು, ಗುತ್ತಿಗೆದಾರರು 1.12 ಲಕ್ಷ ರೂ.ಗಳಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಹಣ ಪಡೆದಿರುತ್ತಾರೆ. ಹಾಗೂ ಹೊಸ ಹರಿಜನವಾಡ ಕೊಳಚೆ ಪ್ರದೇಶಕ್ಕೆ 3.69 ಲಕ್ಷ ರೂ.ಮಂಜೂರು ಮಾಡಲಾಗಿದ್ದು ಗುತ್ತಿಗೆದಾರರು ಈವರೆಗೆ 1.81 ಲಕ್ಷ ರೂ.ಗಳ ಅಭಿವೃದ್ಧಿ ಕೆಲಸಗಳನ್ನು ಪೂರ್ಣ ಗೊಳಿಸಿದ ಹಣ ಪಡೆದಿರುತ್ತಾರೆ.

ಈ) ಅಭಿವೃದ್ಧಿ ಕಾರ್ಯಗಳಲ್ಲಿನ ವಿಳಂಬಕ್ಕೆ ಗುತ್ತಿಗೆದಾರರು ಕೆಲಸ ನಡೆಯುವ ಸಮಯದಲ್ಲಿ ಲೋಕೋಪಯೋಗಿ ಇಲಾಖೆಯ ಹೊಸ ದರಪಟ್ಟಿ ಬಂದ ಕಾರಣ ಹೊಸ ದರಪಟ್ಟಿಯಂತೆ ಹಣ ಪಾವತಿ ಮಾಡಲು ಕೋರಿ ಕೆಲಸ ಸ್ಥಗಿತ ಗೊಳಿಸಿದ್ದೆ ಕಾರಣವಾಗಿರುತ್ತದೆ.

ಉ) ಹೌದು, ಈ ತನಕ ಖರ್ಚಾಗಿರುವ ಹಣವನ್ನು ಪೂರ್ಣಗೊಂಡಿರುವ ಕೆಲಸಗಳಿಗೆ ಮಾತ್ರ ಕೊಡಲಾಗಿರುತ್ತದೆ.

ಊ) ಈ ಕೆಲಸಗಳಿಗೆ ಮಂಜೂರಾಗಿದ್ದು ಹಣದಲ್ಲಿ ಯಾವುದೇ ದುರುಪಯೋಗವಾಗಿರುವುದಿಲ್ಲ. ಕಾರಣ ಗುತ್ತಿಗೆದಾರರಿಗೆ ಅವರು ಸಂಪೂರ್ಣವಾಗಿ ನಿರ್ವಹಿಸಿರುವಷ್ಟು ಕೆಲಸಕ್ಕೆ ಮಾತ್ರ ಹಣ ಪಾವತಿ ಮಾಡಲಾಗಿದೆ.